**1**

**ಬಾಳಾಸಾಹೇಬ** ಲೋಕಾಪುರ ಬರೆಯುತ್ತಿರುವ ಕಾದಂಬರಿಯೊಂದರಲ್ಲಿ ಬರುವ ಒಂದು ಚಾರಿತ್ರಿಕ ಚಿತ್ರ ಇದು: 1930ರ ಸುಮಾರಿಗೆ ಗಾಂಧೀಜಿ ಕರ್ನಾಟಕದ ಗಡಿನಾಡಿನ ಒಂದು ರೈಲ್ವೇ ಸ್ಟೇಶನ್ನಿನಲ್ಲಿ ಇಳಿಯುತ್ತಾರೆ. ಸುತ್ತಲ ಊರೂರುಗಳಿಂದ ಜನ ಅವರನ್ನು ನೋಡಲು, ಮುಟ್ಟಲು ಓಡೋಡಿ ಬರುತ್ತಾರೆ. ಸ್ವಲ್ಪ ಹೊತ್ತಿನ ನಂತರ ಟ್ರೈನು ಅಲ್ಲಿಂದ ಹೊರಡುತ್ತದೆ. ಜನ ಟ್ರೈನಿನ ಹಿಂದೆಯೇ ಓಡುತ್ತಾರೆ. ಮತ್ತೊಂದು ಸ್ಟೇಶನ್ನಿನಲ್ಲಿ ಟ್ರೈನು ನಿಲ್ಲುವ ತನಕ ಹಳಿಗಳ ಪಕ್ಕದಲ್ಲಿ ಜನ ಓಡುತ್ತಲೇ ಇರುತ್ತಾರೆ. ಹೀಗೆ ಓಡುವ ಜನರ ಜೊತೆಗೆ ಇನ್ನಷ್ಟು ಜನ ಕೂಡಿಕೊಳ್ಳುತ್ತಲೇ ಹೋಗುತ್ತಾರೆ!

ಈ ಪ್ರಸಂಗ ಕೇಳಿಸಿಕೊಂಡ ಹಿರಿಯ ಗಾಂಧೀವಾದಿ ಲೇಖಕರೊಬ್ಬರು ಹೇಳಿದರು: ‘ಇದು ಕೇವಲ ಕರ್ನಾಟಕದಲ್ಲಷ್ಟೇ ಅಲ್ಲ, ಆ ಕಾಲದಲ್ಲಿ ದೇಶದ ಎಲ್ಲೆಡೆ ಕಾಣುತ್ತಿದ್ದ ಚಿತ್ರ!’

ಅಷ್ಟೊತ್ತಿಗಾಗಲೇ ಎಪ್ಪತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಹಲವು ದಿಕ್ಕುಗಳಲ್ಲಿ ನಡೆದಿದ್ದ ಸ್ವಾತಂತ್ರ್ಯ ಚಳವಳಿ, 1915ರಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿ ಬಂದ ನಂತರದ ವರ್ಷಗಳಲ್ಲಿ ಪಡೆದ ಹೊಸ ಹುಮ್ಮಸ್ಸಿನ ಕಾಲದ ಚಿತ್ರಗಳಿವು. ಸ್ವಾತಂತ್ರ್ಯ ಚಳವಳಿಗೆ ಬಂದು ಕೂಡಿಕೊಳ್ಳುತ್ತಲೇ ಇದ್ದ ಸಾವಿರಾರು ನದಿಗಳ ಜನತಾ ಮಹಾಪೂರ ಎಂಥದೆಂಬುದನ್ನು ಈ ಚಿತ್ರಗಳು ನೆನಪಿಸುತ್ತದೆ. ದುರದೃಷ್ಟವೆಂದರೆ, ಆ ವೇಳೆಗಾಗಲೇ ಆವರೆಗೆ ಇಂಥ ಲಕ್ಷಾಂತರ ಕಾಲುಗಳು ಸ್ವಾತಂತ್ರ್ಯದ ಓಟಗಳಲ್ಲಿ ಮುರಿದುಬಿದ್ದಿದ್ದವು. ಆದರೆ ಗಾಂಧೀಜಿ ಹೊಸದಾಗಿ ರೂಪಿಸಿದ ಅಸಹಕಾರ, ಹರತಾಳ, ಅಹಿಂಸೆಗಳ ಹೊಸ ಮಾರ್ಗವನ್ನು ಕಂಡು ಸಾಮಾನ್ಯ ಜನರ ಕಾಲುಗಳು ಮತ್ತೆ ಉತ್ಸಾಹದಿಂದ ಓಡಲಾರಂಭಿಸಿದವು. ಇಂಥ ನಿಸ್ವಾರ್ಥ ಓಟದ ಸಾಮಾನ್ಯ ಸಹಯೋಧರು ಕೂಡ ಗಾಂಧೀಜಿಯನ್ನು ದೊಡ್ಡ ನಾಯಕರನ್ನಾಗಿ ರೂಪಿಸಿದ್ದ ಕತೆಯನ್ನೂ ಈ ಚಿತ್ರಗಳು ಹೇಳುತ್ತವೆ. ಇವತ್ತು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯ ಇಂಥ ಕೋಟ್ಯಂತರ ಜನರ ಬಲಿದಾನಗಳಿಂದ ಬಂದಿದೆ ಎಂಬ ಸತ್ಯ ಎಂದೆಂದಿಗೂ ನಮ್ಮ ಪ್ರಜ್ಞೆಯಿಂದ ಮರೆಯಾಗಬಾರದು.

ಅದರ ಜೊತೆಗೇ ಮತ್ತೊಂದು ಸತ್ಯವೂ ಎಲ್ಲರಿಗೆ ನೆನಪಿರಲಿ: ಸುಮಾರು ನೂರೈವತ್ತು ವರ್ಷಗಳ ಕಾಲ ಭಾರತದ ಉದ್ದಗಲಕ್ಕೂ ಹೀಗೆ ಸ್ವಾತಂತ್ರ್ಯಕ್ಕಾಗಿ ಓಡಿದ ಅನಾಮಧೇಯ ಕಾಲುಗಳು ಒಂದು ಜಾತಿಯವಾಗಿರಲಿಲ್ಲ, ಒಂದು ಪ್ರಾಂತದವಾಗಿರಲಿಲ್ಲ, ಒಂದು ಧರ್ಮದವಾಗಿರಲಿಲ್ಲ. ಒಂದು ಸಿದ್ಧಾಂತದವಾಗಿರಲಿಲ್ಲ. ಸ್ವಾತಂತ್ರ್ಯಕ್ಕಾಗಿ ಓಡುತ್ತಿದ್ದ ಈ ಕಾಲುಗಳು ದೇಶದ ಹಲವು ಮೂಲೆಗಳಿಂದ, ಕುಗ್ರಾಮ, ಪಟ್ಟಣ, ನಗರಗಳಿಂದ ತಂತಾವೇ ಧಾವಿಸಿ ಬಂದಿದ್ದವು. ನೂರೈವತ್ತು ವರ್ಷಗಳ ಭಾರತದ ಈ ಮಹಾನ್ ಸ್ವಾತಂತ್ರ್ಯದ ಓಟವನ್ನು ಇವತ್ತು ಹಿಂತಿರುಗಿ ನೋಡಿದರೆ, ಭಾರತದ ಸ್ವಾತಂತ್ರ್ಯ ಸಂಗ್ರಾಮ ಒಂದು ಬೃಹತ್ ದೇಶದ ಜನತೆ ಕಾಲಕಾಲಕ್ಕೆ ತನ್ನ ಬುದ್ಧಿಗೆ ತೋಚಿದಂತೆ, ಸ್ಫೂರ್ತಿ ಕರೆದೊಯ್ದಂತೆ ದಶದಿಕ್ಕುಗಳಲ್ಲಿ ಪ್ರಯೋಗ ಮಾಡಿ ಕಟ್ಟಿದ ಮಹಾನ್ ಜನತಾ ಚಳವಳಿಯಂತೆಯೂ ಕಾಣತೊಡಗುತ್ತದೆ. ಇಷ್ಟೊಂದು ವೈವಿಧ್ಯಮಯ ಮುಖಗಳ ಸ್ವಾತಂತ್ರ್ಯ ಚಳವಳಿ ಇಡೀ ಜಗತ್ತಿನಲ್ಲಿ ಇನ್ನೊಂದಿಲ್ಲ ಎಂಬುದನ್ನು ಚರಿತ್ರಕಾರರು ಈಗಾಗಲೇ ದಾಖಲಿಸಿಯೂ ಆಗಿದೆ.

